Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
## ಪುಲಿಕೇಶಿನಗರ ಉಪ ವಿಭಾಗ, ವಾರ್ಡ್ ನಂ.61(ಎಸ್.ಕೆ ಗಾರ್ಡೆನ್)
## ವಾರ್ಡ್ ಸಮಿತಿ ಸಭೆ, ದಿನಾಂಕ:06-03-2021 ರ ಸಭಾ ನಡವಳಿ

**ಸಂಖ್ಯೆ:** ಸ.ಕಾನಿ.ಅ (ಪು.ನ)/ಪಿಆರ್/12/20-21

ದಿನಾಂಕ: 06-03-2021 ರಂದು ಬೆಳ್ಳಿಗೆ 01.00 ಗಂಟೆಗೆ ವಾರ್ಡ್ ನಂ. 61-ಎಸ್.ಕೆ ಗಾರ್ಡೆನ್ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಹಾಯಕ ಅಭಿಯಂತರರು ರವರ ವಾರ್ಡ್ ಕಛೇರಿ ಐ.ಟಿ.ಐ ಲೇಔಟ್ ಎಸ್.ಕೆ ಗಾರ್ಡನ್ ವಾರ್ಡ್ ಸಂಖ್ಯೆ 61 ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

| ಕ್ರಮ ಸಂಖ್ಯೆ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | Atif Ahmed | Nodal Officer ward No. 61-S.K Garden & Asst. Executive Engineer, J.C. Nagar Sub-division |
| 2 | Dr. Zaiba | Medical Officer |
| 3 | Venkatesh | Senior Health Inspector |
| 4 | Harish | JHI Ward No 61 |
| 5 | Srinivas | Senior Vetenary Inspector |
| 6 | Smt: M. Meena | Welfare Tailoring Teacher |
| 7 | Ragavendra N | Tax Inspector |
| 8 | Narasimhaiah | BWSSB |
| 9 | Manohar | JE Bescom |
| 10 | Anand | JE Bescom |

ಶ್ರೀ ಅತೀಫ್ ಅಹಮ್ಮದ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಜೆ.ಸಿ ನಗರ ಉಪ ವಿಭಾಗ ಹಾಗೂ ವಾರ್ಡ್ ಕಮಿಟಿ ಅಧ್ಯಕ್ಷರು (ನೋಡಲ್ ಅಧಿಕಾರಿ) ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿ/ ನೌಕರರು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

- ದಿನಾಂಕ : 06-03-2021 ರಂದು ನಡೆದ ಸಭೆಯ ಸಭಾ ನಡವಳಯನ್ನು ಚರ್ಚಿಸಿ ಬಾಕಿ ಇರುವ ಕುಂದು ಕೊರತೆಗಳನ್ನು ಪೂರೈಸಲು ಸಭೆಯಲ್ಲಿ ತಿಳಿಸಿರುತ್ತಾರೆ.
- **ಘನತ್ಯಾಜ್ಯ ನಿರ್ವಹಣೆ ಕೋಶದ ಅಧಿಕಾರಿಗಳಿಗೆ:**
  1. ವಾರ್ಡ್‌ನ ಬ್ಲಾಕ್‌ಸ್ಪಾಟ್‌ಗಳಲ್ಲು ಸ್ವಚ್ಛಗೊಳಿಸಲು ಸಂಬಂಧಪಟ್ಟ ಘನತ್ಯಾಜ್ಯ ನಿರ್ವಹಣ ಸಹಾಯಕ ಕಾರ್ಯಪಾಲಕ ಅಭಿಯಂತರರು/ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಗತ್ಯಾ ಕ್ರಮ ವಹಿಸಲು ಸೂಚಿಸಲಾಯಿತು.
  2. ವಾರ್ಡ್ ವ್ಯಾಪ್ತಿಯಲ್ಲಿ ಮನೆ ಮನೆಯಿಂದ ಕಸ ಸಂಗ್ರಹಣೆ ಮಾಡುತ್ತಿರುವ ಆಟೋ ಟಿಪ್ಪರ್ ವಾಹನಗಳು ಸ್ಲಾಂ ಪ್ರದೇಶದಲ್ಲಿ ಪ್ರತಿ ದಿನ ಕಸ ಸಂಗ್ರಹಣೆ ಮಾಡುತ್ತಿಲ್ಲವೆಂದು ದೂರು ನೀಡಿರುವ ಮೆರೆಗೆ ಈ ಕೂಡಲೇ ಸಂಬಂಧಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರು ಕ್ರಮ ವಹಿಸುವಂತೆ ಈ ಮೂಲಕ ಸೂಚಿಸಿದೆ..
- **ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳಿಗೆ:**
  1. ವಾರ್ಡ್ ಪ್ರದೇಶ ಸಾರ್ವಜನಿಕರಿಗೆ ಕೋವಿಡ್-19 ರ ಪರೀಕ್ಷೆ (Rapid Checkup) ಹೆಚ್ಚು ಮಾಡುವಂತೆ ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಯಿತು.
- **ವಿದ್ಯುತ್ ವಿಭಾಧ ರವರಿಗೆ:**
  1. ರಸ್ತೆಯ ಬೀದಿ ಕೇಬಲ್ ದುರಸ್ಥಿಯನ್ನು ಬಿಬಿಎಂಪಿ ಮತ್ತು ಬಸ್ಕಾಂ ಸೇರಿ ಈ ಕೂಡಲೇ ಸರಿಪಡಿಸುವಂತೆ ಸೂಚಿಸಲಾಯಿತು.

- **ಕಲ್ಯಾಣ ಇಲಾಖೆ:**
  1. ಬೀದಿ ವ್ಯಾಪಾರಿಗಳಿಗೆ ಗುರುತಿನ ಚೀಟಿಗಳನ್ನು ನೀಡುವಂತೆ ಮಾನ್ಯ ಶಾಸಕರು ತಿಳಿಸಿದರು.

- **ಪಶುಸಂಗೋಪನೆ:**
  1. ಡಿ.ಜೆ ಹಳ್ಳಿ ಮೋದಿ ಗಾರ್ಡನ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿ ಜಾಸ್ತಿಯಾಗಿದ್ದು, ಇದರ ಬಗ್ಗೆ ಸೂಕ್ತ ಕ್ರಮ ವಹಿಸಲು ಸೂಚಿಸಲಾಯಿತು.
  2. ಅಕ್ರಮ ಮಾಂಸದ ಅಂಗಡಿಗಳಿಗೆ ನೋಟಿಸ್ ನೀಡಲು ತಿಳಿಸಿದೆ.
  3. ಪ್ರಾಣಿ ತ್ಯಾಜ್ಯವನ್ನು ವಾರ್ಡ್ ಪ್ರದೇಶದಲ್ಲಿ ಡಂಪಿಂಗ್ ಮಾಡುವ ಅಂಗಡಿ ಮಾಲೀಕರಿಗೆ ದಂಡ ವಿಧಿಸಲು ಸೂಚಿಸಲಾಯಿತು.

- **ಕಾಮಗಾರಿ ಇಲಾಖೆಗೆ.**
  1. ಮೋದಿ ಗಾರ್ಡನ್ ಮುಖ್ಯ ರಸ್ತೆಗಳಲ್ಲಿ ಪಾಟ್ ಹೋಲ್ಸ್ (Pot holes) ಕಾಮಗಾರಿಯನ್ನು ನಿರ್ವಹಿಸುವಂತೆ ಸೂಚಿಸಲಾಯಿತು.
  2. ಐ.ಟಿ.ಐ ಲೇಔಟ್ 18ನೇ ಅಡ್ಡ ರಸ್ತೆ ಹತ್ತಿರಾ (Aspalts) ಕಾಮಗಾರಿಯನ್ನು ಈ ಕೂಡಲೇ ನಿರ್ವಹಿಸಲು ಸೂಚಿಸಲಾಯಿತು.
  3. ಸಿಸಿ ರೋಡ್ಸ್ ನಿರ್ಮಾಣ ಮಾಡುವಂತೆ ಸೂಚಿಸಲಾಯಿತು.

- **ಕಂದಾಯ ಇಲಾಖೆ:**
  1. ಸಂಬಂಧಪಟ್ಟ ವಾರ್ಡ್ ಪ್ರದೇಶಗಳಲ್ಲಿ ಆದಾಯ ತೆರಿಗೆಗಳನ್ನು ವಸೂಲಿ ಮಾಡಲು ಸೂಚಿಸಲಾಯಿತು.

ಮೇಲ್ಕಂಡ ಸಮಸ್ಯೆಗಳು ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ನೋಡಲ್ ಅಧಿಕಾರಿ ರವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಅತೀಫ್ ಅಹಮ್ಮದ್)
ಅಧ್ಯಕ್ಷರು (ನೋಡಲ್ ಅಧಿಕಾರಿ)
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ: 61

**ಪ್ರತಿಯನ್ನು:**

01. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
02. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
03. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
04. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
05. ಕಂದಾಯ ಅಧಿಕಾರಿ (ಪುಲಕೇಶಿನಗರ), ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
06. ಸಹಾಯಕ ಕಾರ್ಯಪಾಲಕ ಅಭಿಯಂತರರು(ಪುಲಿಕೇಶಿನಗರ) ಎಸ್‌ಡಬ್ಲ್ಯೂಎಂ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
07. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
08. ಸಹಾಯಕ ಅಭಿಯಂತರರು(ವಿದ್ಯುತ್/ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
09. ಕಛೇರಿ ಕಡತಕ್ಕೆ.